# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

(4ನೇ ಆವೃತ್ತಿಯ ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್‌ಐಆರ್‌ಎಫ್-2024: ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತುಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನವನ್ನು ಹೊಂದಿದೆ)

ಕುಲಸಚಿವ (ಪರೀಕ್ಷಾಂಗ)ರವರಕಛೇರಿ
ವಿಶ್ವವಿದ್ಯಾನಿಲಯಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005

ಸಂಖ್ಯೆ:ಪ.ವಿ.8.6/07/ಅಧಿಸೂಚನೆ/2010-11 ದಿನಾಂಕ: 20-11-2025

## ಸುತ್ತೋಲೆ

ವಿಷಯ: ಮಂಡ್ಯ, ಹಾಸನ ಮತ್ತು ಚಾಮರಾಜ ನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿನ ಕಾಲೇಜುಗಳ NEP ಪದ್ಧತಿಯ ಪುನರಾವರ್ತಿತ (ರಿಪೀಟರ್ಸ್ ಮತ್ತು ಮರು ನೊಂದಣಿ ಪಡೆದಿರುವ) ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ಮೌಲ್ಯ ಭವನ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ನಡೆಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಇದೇ ಸಮ ಸಂಖ್ಯೆಯ ಪರಿಷ್ಕೃತ ಅಧಿಸೂಚನೆ(1) ದಿನಾಂಕ 08-10-2025
2. ಈ ಕಛೇರಿ ಪತ್ರ ಸಂ.ಪ.ಸು.ವಿ.SEP/NEP/ವೇಳಾಪಟ್ಟಿ/2025-26 ದಿನಾಂಕ: 11.11.2025.

******

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕ ಪದವಿಯ ಪರೀಕ್ಷೆಗಳು ದಿನಾಂಕ 24-11-2025 ರಿಂದ ಪ್ರಾರಂಭವಾಗುತ್ತಿದ್ದು, ಮಂಡ್ಯ, ಹಾಸನ ಮತ್ತು ಚಾಮರಾಜ ನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿನ ಕಾಲೇಜುಗಳ NEP ಪದ್ಧತಿಯ ಪುನರಾವರ್ತಿತ (ರಿಪೀಟರ್ಸ್ ಮತ್ತು ಮರು ನೊಂದಣಿ ಪಡೆದಿರುವ) ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು **ಮೌಲ್ಯ ಭವನ, ಮಾನಸ ಅತಿಥಿಗೃಹದ ಎದುರು, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು,** ಇಲ್ಲಿ ನಡೆಸಲಾಗುತ್ತದೆ.

ಈ ವಿಷಯವನ್ನು ತಮ್ಮ ತಮ್ಮ ಕಾಲೇಜುಗಳ ಪುನರಾವರ್ತಿತ (ರಿಪೀಟರ್ಸ್ ಮತ್ತು ಮರು ನೊಂದಣಿ ಪಡೆದಿರುವ) ವಿದ್ಯಾರ್ಥಿಗಳ ಗಮನಕ್ಕೆ ತಪ್ಪದೇ ತರಬೇಕಾಗಿ ಕೋರಲಾಗಿದೆ. **ಜೊತೆಗೆ, ತಮ್ಮ ಕಾಲೇಜಿನ ಪರೀಕ್ಷೆ ಇರುವ ದಿನದಂದು ಕಡ್ಡಾಯವಾಗಿ ಇಬ್ಬರು ಕೊಠಡಿ ಮೇಲ್ವಿಚಾರಕರನ್ನು ತಮ್ಮ ಅನುಮತಿ ಪತ್ರದೊಂದಿಗೆ ಮೌಲ್ಯಭವನಕ್ಕೆ ಕಳುಹಿಸಿಕೊಡಬೇಕಾಗಿಯೂ ಕೋರಿದೆ.** ತಪ್ಪಿದಲ್ಲಿ, ಇದರಿಂದ ಉದ್ಭವಿಸಬಹುದಾದ ಯಾವುದೇ ಸಮಸ್ಯೆಗಳಿಗೆ ಆಯಾಯ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರೇ ನೇರ ಹೊಣೆಗಾರರಾಗುತ್ತಾರೆ. ಆದುದರಿಂದ, ದಯಮಾಡಿ ಯಾವುದೇ ಲೋಪಗಳಿಗೆ ಅವಕಾಶ ಮಾಡಿಕೊಡದೇ, ಪರೀಕ್ಷೆಗಳು ಸುಗಮವಾಗಿ ನಡೆಯಲು ತಮ್ಮಗಳ ಸಹಕಾರವನ್ನು ನೀಡುವಂತೆ ಮತ್ತೊಮ್ಮೆ ಕೋರಿದೆ.

**ಕುಲಸಚಿವ (ಪರೀಕ್ಷಾಂಗ)**

20/11/25

ಗೆ:

1. ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ನಿರ್ದೇಶಕರು, ಐ.ಸಿ.ಡಿ. ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - ಈ ಸುತ್ತೋಲೆಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲು ಕೋರಿದೆ.
4. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಅಧೀಕ್ಷಕರು, ಪರೀಕ್ಷಾ ಸುಧಾರಣಾಘಟಕ, ಪರೀಕ್ಷಾಭವನ, ಮೈ.ವಿ.ವಿ. ಮೈಸೂರು.
6. ಮಾನ್ಯ ಕುಲಪತಿಗಳ/ಕುಲಸಚಿವರ/ಕುಲಸಚಿವ(ಪರೀಕ್ಷಾಂಗ)/ಹಣಕಾಸುಅಧಿಕಾರಿ ಅವರುಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕಛೇರಿ ಪ್ರತಿ.